ಶಿವಮೊಗ್ಗ ಜಿಲ್ಲೆಯಲ್ಲಿ ನಿರುದ್ಯೋಗಿಗಳು

ಶ್ರೀ ಕೆ. ಎಂಕಟಪ್ಪ (ಶಿಕಾರಿಪುರ)....

೪೪. ಕಾರ್ಮಿಕ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಶಿವಮೊಗ್ಗಾ ಜಿಲ್ಲೆಯಲ್ಲಿ ಉದ್ಯೋಗವಿಲ್ಲದವರ ಸಂಖ್ಯೆ ಎಷ್ಟು ;

(ಆ) ಇಂಥವರಲ್ಲಿ ಪದವೀಧರರು, ಪದವೀಧರರಲ್ಲದವರು ಮತ್ತು ತಾಂತ್ರಿಕ ವಿಭಾಗದಲ್ಲಿ ಶಿಕ್ಷಣ ಪಡೆದವರು ಎಷ್ಟು ಜನ ;

(ಇ) ಇವರಲ್ಲಿ ಪ್ರತಿಯೊಂದು ಭಾಗದಲ್ಲಿ ಹರಿಜನ ಗಿರಿಜನರ ಸಂಖ್ಯೆ ಎಷ್ಟು ;

(ಈ) ಹರಿಜನ ಗಿರಿಜನರಿಗೆ ಉದ್ಯೋಗಾವಕಾಶ ಸಿಕ್ಕಿದಿಯೆ, ಹಾಗಿದ್ದರೆ ಅವಕಾಶ ಪಡೆದವರ ಸಂಖ್ಯೆ ಎಷ್ಟು, ಮತ್ತು ಪಡೆಯದೆ ಇರುವವರ ಸಂಖ್ಯೆ ಎಷ್ಟು;

(ಉ) ಹರಿಜನ ಗಿರಿಜನರಿಗೆ ಸರಿಯಾದ ಉದ್ಯೋಗಾವಕಾಶ ದೊರೆಯದೇ ಇದ್ದಲ್ಲಿ, ಸರ್ಕಾರ ಅವರಿಗೆ ಉದ್ಯೋಗಕ್ಕೆ ಅವಕಾಶ ದೊರಕುವಂತೆ ಮಾಡಲು ಆಜ್ಞೆ ಏನಾದರೂ ಹೊರಡಿಸುವುದೇ ?

ಶ್ರೀ ಆಜೀಜ್ ಸೇಟ್ : (ಕಾರ್ಮಿಕ ಮಂತ್ರಿಗಳು)—

ಉತ್ತರ—(ಅ) ಶಿವಮೊಗ್ಗಾ ಜಿಲ್ಲೆಯ ಉದ್ಯೋಗವಿಲ್ಲದವರ ಸಂಖ್ಯೆ ಎಷ್ಟು ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಉದ್ಯೋಗವಿನಿಮಯ ಕೇಂದ್ರದಲ್ಲಿ ಹೆಸರು ನೋಂದಾಯಿಸಿದವರ ಸಂಖ್ಯೆ ೧೭೫೦೮ (೧-೩-೭೩)

(ಆ) ಪದವೀಧರರು	....	೧,೩೫೦
ಪದವೀಧರರಲ್ಲದವರು	....	೧೫,೯೫೮
	....	೧೭,೨೦೮
ತಾಂತ್ರಿಕ ವಿಭಾಗದಲ್ಲಿ ಶಿಕ್ಷಣ ಪೆಡೆದವರು	....	೧,೧೧೦

(ಶ್ರೀ ಅಜೀಜ್ ಸೇಠ್)

(ಇ)	ಹರಿಜನ	ಗಿರಿಜನ	ಒಟ್ಟು
ಪದವೀಧರರು	೧೦	....	೧೦
ಪದವೀಧರರಲ್ಲದವರು	೩೭೬	೭	೩೮೩
	೩೮೬	೭	೩೯೩
ತಾಂತ್ರಿಕ ವಿಭಾಗದಲ್ಲಿ ಶಿಕ್ಷಣ ಪಡೆದವರು	೪೬	....	೪೬

(ಈ) ಹೌದು, ಅವಕಾಶ ಪಡೆದವರ ಸಂಖ್ಯೆ ೨೫

ಅವಕಾಶಪಡೆಯದವರ ಸಂಖ್ಯೆ ೩೯೩

(ಉ) ರಾಜ್ಯ ಸರ್ಕಾರದ ಸೇವಾ ನಿಯಮಾವಳಿಗಳ ಮೆಟ್ಟಿಗೆ ಹೇಳುವುದಾದರೆ ಸಂವಿಧಾನದ ವಿಧಿ ೧೪, ೧೬ ಮತ್ತು ೩೩೫ನ್ನು ಪರಿಗಣಿಸಿ ಮೈಸೂರು ಸರ್ಕಾರವು ನೇರವಾಗಿ ನೇಮಕ ಮಾಡುವ ಹುದ್ದೆಗಳಿಗೆ ಹರಿಜನ ಮತ್ತು ಗಿರಿಜನರಿಗೆ ಕ್ರಮವಾಗಿ ಶೇಕಡಾ ೧೫ ಮತ್ತು ಶೇಕಡಾ ೩ರಷ್ಟು ಹುದ್ದೆಗಳನ್ನು ಮೀಸಲಿರಿಸಿದೆ. ಸಾರ್ವಜನಿಕ ಉದ್ಯಮಗಳಲ್ಲಿಯೂ ಸಹ ಇದೇ ರೀತಿಯಲ್ಲಿ ಹುದ್ದೆಗಳನ್ನು ಮೀಸಲಿರಿಸುವ ಕ್ರಮವನ್ನು ಅನುಸರಿಸಬೇಕೆಂದು ವಿನಂತಿಸಿಕೊಳ್ಳಲಾಗಿದೆ.

TREATING ARREARS OF LOANS GIVEN TO MUNICIPALITIES GRANTS

45. (49) SRI A. D. Biligowda (Maddur).—

Will the Minister for Municipal Administration be pleased to state.—

(*a*) whether the Government is aware of the fact that many of the municipalities in the State have not been able to turn out sufficient improvement works for the reason that repayment of loans advanced for Protected Water Supply Scheme, has been a burden on them;

(*b*) whether the Government would consider to treat the out standing arrears of loans, has grant and waive the demand ?